ಆ) ಸ್ವಾಯತ್ತತೆ ನೀಡುವಂತೆ ಯಾವ ಕಾಲೇಜುಗಳಿಂದ ಮನವಿ ಸಲ್ಲಿಸಲಾಗಿದೆ, ಮನವಿ ಸಲ್ಲಿಸಿದ್ದು ಯಾವಾಗ;

ಇ) ಮೈಸೂರಿನ ಸರ್ಕಾರಿ ಮೆಡಿಕಲ್ ಕಾಲೇಜಿಗೆ ಸ್ವಾಯತ್ತತೆ ನೀಡಬೇಕೆಂದು ವನವಿ ಬಂದಿದೆಯೇ; ಈ ಬಗ್ಗೆ ಸರ್ಕಾರ ಯಾವ ಯಾವ ಕ್ರಮವಹಿಸುವುದು?

ಶ್ರೀ ಇಕ್ಬಾಲ್ ಅನ್ಸಾರಿ (ವೈದ್ಯಕೀಯ ಶಿಕ್ಷಣ ಸಚಿವರು)

ಅ) 1) ಕರ್ನಾಟಕ ವೈದ್ಯಕೀಯ ವಿಜ್ಞಾನಗಳ ಸಂಸೆ, ಹುಬ್ಬಳ್ಳಿ

2) ವಿಜಯನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಬಳ್ಳಾರಿ

3) ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ತೆ ಬೀದರ್

4) ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ರಾಯಚೂರು

5) ಬೆಳಗಾಂ ವೈದ್ಯಕೀಯ ವಿಜ್ಞನಗಳ ಸಂಸ್ಥೆ ಬೆಳಗಾಂ

6) ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮಂಡ್ಯ

7) ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಶಿವಮೊಗ್ಗ

8) ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಹಾಸನ

ಆ) ಇ) ಬೆಂಗಳೂರು ವೈದ್ಯಕೀಯ ಕಾಲೇಜಿಗೆ ಮೈಸೂರು ವೈದ್ಯಕೀಯ ಕಾಲೇಜಿಗೆ ಮತ್ತು ಸರ್ಕಾರಿ ದಂತ ಕಾಲೇಜಿಗೆ ಸ್ವಾಯತ್ತತೆ ನೀಡುವ ವಿಚಾರ ಈಗಾಗಲೇ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

3798(4363) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) ಮಾನ್ಯ ಶ್ರೀ ಇಕ್ಬಾಲ್ ಅನ್ಸಾರಿ (ವೈದ್ಯಕೀಯ ಶಿಕ್ಷಣ ಸಚಿವರು) ಈಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರು.

ಅ)ಮೈಸೂರು ನಗರದ ಕೆ.ಆರ್. ಆಸ್ಪತ್ರೆ ಹಾಗೂ ಚೆಲುವಾಂಬ ಆಸ್ಪತ್ರೆ ಮಕ್ಕಳ ಆಸ್ಪತ್ರೆಯಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳೆಷ್ಟು ಈ ಹುದ್ದೆಗಳ ಪೈಕಿ ಯಾವ ಯಾವ ಹುದ್ದೆಗಳು ಎಷ್ಟೆಷ್ಟು ವರ್ಷಗಳಿಂದ ಖಾಲಿ ಇವೆ. (ವಿವರ ನೀಡುವುದು)

ಆ) ಈ ಹುದ್ದೆಗಳು ಖಾಲಿ ಇರುವುದರಿಂದ ಇರುವ ಕಡಿಮೆ ಸಿಬ್ಬಂದಿಗಳಿಂದಾಗಿ ರೋಗಿಗಳಿಗೆ ಸಮರ್ಪಕ ವೈದ್ಯಕೀಯ ಸೇವೆ ಒದಗಿಸಲಾಗುತ್ತಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಖಾಲಿ ಇರುವ ಹುದ್ದೆಗಳ ಭರ್ತಿಗೆ ಸರ್ಕಾರ ಯಾವ ಯಾವ ಕ್ರಮವಹಿಸಿದೆ, ಭರ್ತಿ ಪೂರ್ಣಗೊಳಿಸುವುದು ಯಾವಾಗ?

ಶ್ರೀ ಇಕ್ಬಾಲ್ ಅನ್ಸಾರಿ (ವೈದ್ಯಕೀಯ ಶಿಕ್ಷಣ ಸಚಿವರು)

ಅ)ಮೈಸೂರು ನಗರದ ಕೆ.ಆರ್. ಆಸ್ಪತ್ರೆ ಹಾಗು ಚೆಲುವಾಂಬ ಆಸ್ಪತ್ರೆಗಳಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳ ವಿವರ ಈ ಕೆಳಕಂಡಂತಿದೆ;

ಹುದ್ದೆಯ ಪದನಾಮ	ಕೆ.ಆರ್. ಆಸ್ಪತ್ರೆ	ಯಾವ ವರ್ಷದಿಂದ	ಚೆಲುವಾಂಬ ಆಸ್ಪತ್ರೆ	ಯಾವ ವರ್ಷದಿಂದ
ಪ್ರಾಧ್ಯಾಪಕರು	45	02	05	ಸುಮಾರು ಎರಡು ವರ್ಷಗಳಿಂದ ಖಾಲಿ ಇರುತ್ತದೆ.
ಸಹಾಯಕ ಪ್ರಾಧ್ಯಾಕಪರು	39		06	
ಉಪನ್ಯಾಸಕರು	68		04	
ಹಿರಿಯ ತಜ್ಞರು	04			
ಸಹಾಯಕ ವೈದ್ಯಾಧಿಕಾರಿ	01			
ಸಿವಿಲ್ ಸರ್ಜನ್	01			
ಶುಶ್ರೂಷಕ ಅಧೀಕ್ಷಕರು–2	06	01	02	05
ಶುಶ್ರೂಷಕ ಬೋಧಕರು	05	03		
ಹಿರಿಯ ಶುಶ್ರೋಷಕಿಯರು			08	02
ಹಿರಿಯ ಫಾರ್ಮಾಸಿಸ್ಟ್	03	02	01	01
ಡಯಟಿಷಿಯನ್	01	13	–	–
ರೇಡಿಯೋ ಗ್ರಾಫರ್	02	02	–	–
ಕಿರಿಯ ಪ್ರಯೋಗಶಾಲಾ ತಂತ್ರಜ್ಞರು	02	03	–	–
ವಾಹನ ಚಾಲಕರು	03	02	01	07
ಕಿರಿಯ ಮಹಿಳಾ ಆರೋಗ್ಯ	–	–	01	1 ತಿಂಗಳು

ಸಹಾಯಕಿಯರು				
ಪ್ರೋಥೆಟೊಸ್ಟ್	01	15	–	–
ಆರ್ಥೋ ಆಪ್ಟಸ್ಟ್	01	15	–	–
ಎಲೆಕ್ಟ್ರಿಷಿಯನ್	01	15	–	–
ಹಿರಿಯ ಶುಶ್ರೂಷಕರು	24	03	–	–
ಜಿಲ್ಲಾ ಉಪ ಆರೋಗ್ಯ ಶಿಕ್ಷಣಾಧಿಕಾರಿ	01	01	–	–
ಗ್ರೂಪ್ ಡಿ	98		54	
ಬೆರಳಚ್ಚುಗಾರರು	–	–	01	01

ಆ) ಹೌದು. ಈಗ ಸೇವಾನಿತರರಾದ ಸಿಬ್ಬಂದಿ ವರ್ಗಗಳಲ್ಲಿ ಹಾಗೂ ಸ್ನಾತಕೊತ್ತರ ವಿದ್ಯಾರ್ಥಿಗಳಿಂದ ಮತ್ತು ಗೃಹವೈದ್ಯರುಗಳಿಂದಾಗಿ ರೋಗಿಗಳಿಗೆ ತೊಂದರೆ ಆಗದಂತೆ ಕಾರ್ಯವನ್ನು ನಿರ್ವಹಿಸಲಾಗುತ್ತಿದೆ.

ಇ) ಖಾಲಿ ಇರುವ ಬೋಧಕ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ವಿಶೇಷ ನೇಮಕಾತಿ ಮೂಲಕ ನೇಮಕ ಮಾಡಲಾಗುತ್ತಿದೆ.**3799(4364)** ಶ್ರೀ ಶಂಕರಲಿಂಗೇಗೌಡ ಎಸ್.ಎಸ್.(ಚಾಮರಾಜ) ಮಾನ್ಯ ಡಾ॥ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) ಈಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರು.

ಅ)ಸರ್ಕಾರಿ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ವಿಧಿಸುತ್ತಿರುವ ಅನುಬೋಗ ಶುಲ್ಕದ ವಿಚಾರದಲ್ಲಿ ಶುಲ್ಕ ವಿಧಿಸಲು ಪ್ರಾರಂಬಿಸಿದಾಗಿನಿಂದ ಈ ವರೆಗೆ ಯಾವ ಯಾವ ಆಸ್ಪತ್ರೆಗಳಲ್ಲಿ ಎಷ್ಟೆಷ್ಟು ಜಮಾ ಮಾಡಿಕೊಳ್ಳಲಾಗಿದೆ ಎಂಬ ಪರಿಪೂರ್ಣ ವಿವರ ನೀಡುವುದು.

ಆ) ಈ ರೀತಿಯಾಗಿ ಅನುಬೋಗ ಶುಲ್ಕ ವಿಧಿಸುತ್ತಿರುವುದರಿಂದ ಬಡ ರೋಗಿಗಳಿಗೆ ಅನ್ಯಾಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ)ಹಾಗಿದ್ದಲ್ಲಿ ಅನುಬೋಗ ಶುಲ್ಕ ರದ್ದುಪಡಿಸುವ ಬಗ್ಗೆ ಸರಕಾರದ ನೀಲುವೇನು?

ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ)ಜಿಲ್ಲಾವಾರು ವಿವರ ಲಗತ್ತಿಸಲಾಗಿದೆ.

ಆ) ಬಡ ರೋಗಿಗಳಿಗೆ ಹಾಗೂ ಬಡತನ ರೇಖೆಗಿಂತ ಕಡಿಮೆ ವರಮಾನವುಗಳ್ಳವರಿಗೆ (ಬಿಪಿಎಲ್ ಕಾರ್ಡ್‌ವುಳವರಿಗೆ ವಿಧಿಸುತ್ತಿರುವುದಿಲ್ಲ. (ಉಚಿತ ಚಿಕಿತ್ಸೆ ನೀಡಲಾಗುತ್ತಿದೆ.

ಇ) ಉದ್ಭವಿಸುವುದಿಲ್ಲ.